ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



ಒಂದು ಅಂದಾಜಿನ ಪ್ರಕಾರ ಎಂಟು ನೂರಕ್ಕೂ ಹೆಚ್ಚಿನ ಪ್ರಭೇದದ ಹಕ್ಕಿಗಳು ಪ್ರತಿ ವರ್ಷ ಭಾರತಕ್ಕೆ ವಲಸೆ ಬರುತ್ತವೆ. ಇವುಗಳಲ್ಲಿ ನೀರಿನ ಹಕ್ಕಿಗಳು, ಕಾಡಿನ ಹಕ್ಕಿಗಳು, ಹುಲ್ಲುಗಾವಲಿನ ಹಕ್ಕಿಗಳು, ಕಡಲಿಗೆ ಬರುವ ಹಕ್ಕಿಗಳು, ಬೇಟೆಗಾರ ಹದ್ದುಗಳು ಇದ್ದಾವೆ. ಒಂದೊಂದರ ಆಹಾರ ಕ್ರಮವೂ, ಆದ್ಯತೆಯೂ ವಿಭಿನ್ನ. ತಮಗೆ ಸೂಕ್ತ ಆಹಾರ ಮತ್ತು ರಕ್ಷಣೆ ಸಿಗುವ ಲಗತ್ತಾದ ಜಾಗ ಯಾವುದು ಎಂಬುದನ್ನು ಅವು ಮೊದಲೇ ನಿರ್ಧರಿಸಿಕೊಂಡಿರುತ್ತವೆ. ಮಾಡಿದಡುಗೆ ಉಣ್ಣಲು ನೆಂಟರು ಮನೆಗೆ ಬರುವಂತೆ ನಿಗದಿತ ದಿನವೇ ಬಂದಿಳಿಯುತ್ತವೆ.



# ಹಿಮಾಲಯವನ್ನೇ ಸೋಲಿಸುವ ಬಾತುಕೋಳಿ

ನನಗಿದು ಅಪರಿಚಿತ ಕೆರೆ. ಪೊದೆಗಳ ಬಳಸಿ ಅವಿತು ಕುಳಿತಿದ್ದೇನೆ. ಊರೂ ಕೂಡ ಹೊಸತು. ಪರಿಚಯದವರೇ ಇಲ್ಲದ ಅನಾಮಿಕ ತಾವಿನಲ್ಲಿ ಹೇಗೆ ಕೂತಿದ್ದರೂ, ಯಾವ ಸ್ಥಿತಿಯಲ್ಲಿದ್ದರೂ ನಡೆಯುತ್ತೆ. ಪರಸ್ಥಳದಲ್ಲಿ ಸ್ವಾತಂತ್ರ್ಯ, ನೆಮ್ಮದಿ ಮತ್ತು ಭಂಡತನಗಳು ಹೆಚ್ಚು. ನಮ್ಮವರು ತಮ್ಮವರು ಯಾರಾದರೂ ನೋಡುತ್ತಾರೆ ಎಂಬ ಭಯ, ಅಂಜಿಕೆಗಳೇ ಇರುವುದಿಲ್ಲ. ಇಂತಲ್ಲಿ ಯಾರೋ ಸಲುಗೆಯಿಂದ ನನ್ನ ಹೆಸರಿಡಿದು ಕೂಗಿದ; 'ಸಿಕ್ಕಾ ಕಳ್ಳಾ ನನ್ಮಗ!' ಎಂಬ ಸಂಭ್ರಮ ಅವನ ದನಿಯಲ್ಲಿತ್ತು. 'ನೀನೇನಿಲ್ಲೇ ಲೌಡೀದೆ ಇಲ್ಲಿ ಬಚ್ಚಿಟ್ಕೊಂಡು ಕುಂತಿಯಾ?' ಎಂದ. ಈ ಲೌಡೀದೆ ಧಾಟಿ ಗಮನಿಸಿದರೆ ಓಹೋ ಪಕ್ಕಾ ನಮ್ಮೂರು ತರೀಕೆರೆಯವನು. ಈ ಬೈಗುಳದ ಭಾಷಾ ಸೊಗಡು ಇರುವುದೇ ನಮ್ಮ ಸೀಮೆಯಲ್ಲಿ. ಚಕ್ಕನೆ ತಿರುಗಿ ನೋಡಿದೆ. ಅರೆರೆ.. ಪ್ರೈಮರಿ ಚಡ್ಡೀಮೇಟ್ ಕ್ರಾಕ್ ಚಂದ್ರ. ಇವನ್ಯಾಕೆ ಇಲ್ಲಿಗೆ ಬಂದ!

'ಯಪ್ಪಾ.. ಇವನ ಕೈಗೆ ತಗಲಾಕಿಕೊಂಡೆನಲ್ಲ' ಎಂದು ಆ ಕ್ಷಣ ಹೆದರಿಕೆ ಹುಟ್ಟಿತು. ಮಿದುಳು